**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂ. 1443/2023**

ದಿನಾಂಕಃ **22.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲು: ಆರೋಪಿ ಪರ ಶ್ರೀ. ಎಸ್.ಕೆ.ಆರ್ ವಕೀಲರಿಂದಃ**

1. ನಿಪಿ-1 ಅಮಾನ್ಯ ಗೊಂಡ 15 ದಿನಗಳ ನಂತರ ಆರೋಪಿ ಗೆ ನೋಟೀಸ್ ಕೊಟ್ಟಿದ್ದೇನೆ. ಯಾವ ದಿನಾಂಕದಂದು ಅಮಾನ್ಯ ಆಯಿತು ಎಂದು ನೆನಪಿಲ್ಲ. 2 ಬಾರಿ ನೋಟೀಸ್ ಕೊಟ್ಟಿದ್ದನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿದ್ದೇನೆ.

2. ಸಾಕಷ್ಟು ಹಣ ಇಲ್ಲ ಎಂದು ಬ್ಯಾಂಕ್ ನವರು ಹಿಂಬರಹ ಕೊಟ್ಟರು. ಸಾಕಷ್ಟು ಹಣ ಇಲ್ಲ ಎಂದು ಹಿಂಬರಹ ಬಂದ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿದ್ದೇನೆ. ಬ್ಯಾಂಕ್ ನವರು kindly contact drawer and drawee ಎಂಬ ಹಿಂಬರಹ ಕೊಟ್ಟಿರುವುದಿಲ್ಲ. ಚೆಕ್ಕನ್ನು ಯಾವ ದಿನಾಂಕದಂದು ನಗಧೀಕರಣಕ್ಕೆ ಸಲ್ಲಿಸಿದ್ದೆ ಎಂದು ಈಗ ನೆನಪಿಲ್ಲ ಸಾಕ್ಷಿ ಮುಂದುವರಿದು ನಿಪಿ-1 ರಲ್ಲಿ ನಮೂದಿಸಿರುವ ದಿನಾಂಕದಂದೇ ಚೆಕ್ ನಗಧೀಕರಣಕ್ಕೆ ಸಲ್ಲಿಸಿದ್ದೆ. ನಿಪಿ -1 ರಲ್ಲಿ ದಿಃ 05.02.2022 ಎಂದು ನಮೂದಿಸಿದೆ. ಸಾಕ್ಷಿ ಪುನಃ ನಿಪಿ-1 ನ್ನು ಆರೋಪಿ ಯುು ದಿಃ 05.02.2022 ರಂದು ಕೊಟ್ಟಿದ್ದು ಆರೋಪಿ ಚೆಕ್ ಕೊಟ್ಟ 3 ತಿಂಗಳ ನಂತರ ನಗಧೀಕರಣಕ್ಕೆ ಸಲ್ಲಿಸಿದ್ದೇನೆ. ಅಂದರೆ ಆಗಸ್ಟ ತಿಂಗಳಲ್ಲಿ ನಗಧೀಕರಣಕ್ಕೆ ಸಲ್ಲಿಸಿದ್ದೆ. ದಿಃ 02.05.2022 ರಂದು ಆರೋಪಿ ಯು ನಿಪಿ-1 ರಲ್ಲಿ ಆರೋಪಿ ಯು ಸಹಿ ಮಾಡಿ ದಿನಾಂಕ ನಮೂದಿಸಿ ನಿಪಿ-1 ನ್ನು ನನಗೆ ಕೊಟ್ಟ. ಈ ಬಗ್ಗೆ ನಾನು ನೊಟೀಸ್, ಪಿರ್ಯಾದಿ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ.

3. ನಾನು ಮೊದಲನೇ ಸಾರಿ ನೋಟೀಸ್ ಕಳುಹಿಸಿದಾಗ ಆರೋಪಿ ಯ ವಿಳಾಸ ತಪ್ಪು ಇದೆ ಎಂದು ಹಿಂತಿರುಗಿ ಬಂತು. ಎರಡನೇ ಬಾರಿ ಯಾವ

ದಿನಾಂಕದಂದು ನೊಟೀಸ್ ಕೊಟ್ಟೆ ಎಂದು ಈಗ ನೆನಪಿಲ್ಲ. ಎರಡನೇ ಬಾರಿಗೆ ನೋಟೀಸ್ ಆರೋಪಿಯ ಮೇಲೆ ಜಾರಿಯಾಗಿದೆ.

4.. ನಾನು ಎರಡನೇ ಬಾರಿಗೆ ನೋಟೀಸ್ ಕೊಟ್ಟಾಗ ಆರೋಪಿ ಯ ವಿಳಾಸ ಪೂರ್ತಿಯಾಗಿ ಇಲ್ಲಾ ಎಂದು ಹಿಂತಿರುಗಿ ಬಂದಿದೆ ಎಂದರೆ ಸರಿ. ಮೊದಲನೇ ನೋಟೀಸ್ ಸಹ ಡೋರ್ ಲಾಕ್ ಮತ್ತು ವಿಳಾಸ ಸರಿ ಇಲ್ಲಾ ಎಂದು ವಾಪಸ್ಸು ಬಂದಿದೆ ಎಂದರೆ ಸರಿ. ನಾನು ಭೋಗ್ಯಕ್ಕೆ ಇದ್ದ ಮನೆ ಮೇಲೆ ಆರೋಪಿ ವಾಸವಾಗಿದ್ದ ಎಂದರೆ ಸರಿ. ಸದರಿ ಮನೆ ವಿಳಾಸಃ ಕೃಷ್ಣಪ್ಪ ಹಾಸ್ಟಲ್ ವಾರ್ಡನ್ , ಹೆಂಚಿನ ಪ್ಯಾಕ್ಟರಿ ರಸ್ತೆ , ಪೈಪ್ ಲೈನ್ ರಸ್ತೆ , ಕನಕಪುರ. ನಾನು ವಾಸವಾಗಿದ್ದ ಮನೆ ವಿಳಾಸ ಎಂದರೆ ಸರಿ. ನಾನು ಈಗ ಹೇಳಿದ ವಿಳಾಸವನ್ನು ನೋಟೀಸ್ ನಲ್ಲಿ ನಮೂದಿಸಿದ್ದೆ.

5. ನಾನು ಈಗ ಹೇಳಿದ ವಿಳಾಸವನ್ನು ಆರೋಪಿ ಗೆ ಕಳುಹಿಸಿದ ನೊಂದಾಯಿತ ಅಂಚೆಯಲ್ಲಿ ಆರೋಪಿ ಗೆ ಮೋಸ ಮಾಡಲು ನಮೂದಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ಗೆ ಎರಡು ಬಾರಿ ನೋಟೀಸ್ ತಪ್ಪು ವಿಳಾಸಕ್ಕೆ ಕಳುಹಿಸಿ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಎರಡು ಬಾರಿ ನೊಟೀಸ್ ಕಳುಹಿಸಿದ ಬಗ್ಗೆ ಪಿರ್ಯಾದಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿದ್ದೇನೆ. ಒಂದು ದಿನಾಂಕ ಮಾತ್ರ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿದೆ ಎಂದರೆ ಸರಿಯಲ್ಲ.

6. ನಿಪಿ-2 ಹಿಂಬರಹ ಬಂದ ನಂತರ ಆರೋಪಿ ಮನೆಗೆ ಹೋಗಿ ಆ ಬಗ್ಗೆ ಮಾತನಾಡಿದ್ದೇನೆ ದಿನಾಂಕ ನೆನಪಿಲ್ಲ. ಸಾಮಾನ್ಯ ವಾಗಿ ಭೋಗ್ಯಕ್ಕೆ ಇದ್ದವರು ಪೂರ್ತಿ ಹಣ ಸಂದಾಯವಾದ ನಂತರವೇ ಮನೆ ಖಾಲಿ ಮಾಡುತ್ತಾರೆ ಎಂದರೆ ಸರಿ. 2019 ರಲ್ಲಿ ಭೋಗ್ಯ ಪತ್ರ ಆಗಿತ್ತು. 2019 ರಿಂದ ನಾನು ಮತ್ತು ನನ್ನ ಗಂಡ ಒಟ್ಟಿಗೆ ಇದ್ದೆವು. ನನ್ನ ಗಂಡ ಇದ್ದಾಗ ನಾನು ಬೇರೆ ಮನೆಯಲ್ಲಿ ವಾಸವಾಗಿದ್ದೆ ಅವರು ತೀರಿಕೊಂಡ ನಂತರ ನಾನು ಆ ಮನೆಗೆ ಬಂದೆ ಎಂದರೆ

ಸರಿಯಲ್ಲ. ಭೋಗ್ಯದ ವ್ಯವಹಾರ ಆಗಿಲ್ಲ ಮತ್ತು ನಾನು ವೈಯಕ್ತಿಕವಾಗಿ ಆರೋಪಿ ಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಗಂಡ ಕೊಟ್ಟಿದ್ದಾರೆ ಹಣ ಕೊಡುವಾಗ ನಾನು ಇದ್ದೆ. ಸಾಮಾನ್ಯವಾಗಿ ಎಲ್ಲಾರ ಹಾಗೇ ನಾನು ಪೂರ್ತಿ ಹಣ ಪಡೆದುಕೊಂಡು ಮನೆ ಖಾಲಿ ಮಾಡಿದೆ ಎಂದರೆ ಸರಿಯಲ್ಲ.

7. ಪೂರ್ತಿ ಹಣ ಕೊಟ್ಟ ನಂತರವೇ ನಾನು ಮನೆ ಖಾಲಿ ಮಾಡುತ್ತೇನೆ ಎಂದು ಆರೋಪಿ ಗೆ ಹೇಳಿದ್ದೆ. ನಾನು ಆ ರೀತಿ ಕೇಳಿದಾಗ ಆರೋಪಿ ನನಗೆ ಹಣ ಕೊಟ್ಟಿದ್ದರಿಂದ ನಾನು ಮನೆ ಖಾಲಿ ಮಾಡಿದ್ದೆ ಎಂದರೆ ಸರಿಯಲ್ಲ.

8. ನಾನು ಬ್ಯಾಂಕ್ ಗೆ ಚೆಕ್ಕನ್ನು ಎರಡು ಬಾರಿ ನಗಧೀಕರಣಕ್ಕೆ ಸಲ್ಲಿಸಿದ್ದೆ . ಎರಡೂ ಸಾರಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹ ಬಂತು. ಎರಡು ಬಾರಿ ಹಿಂಬರಹ ಬಂದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 6 ರಲ್ಲಿ ಎರಡು ಹಿಂಬರಹ ಇರಲಿಲ್ಲ ಒಂದು ಹಿಂಬರಹ ಇದೆ ಎಂದರೆ ಸರಿಯಲ್ಲ. ನಾನು ಎರಡನೇ ಬಾರಿ ಚೆಕ್ಕನ್ನು ನಗಧೀಕರಣಕ್ಕೆ ಸಲ್ಲಿಸಿದಾಗ ಯಾವ ದಿನಾಂಕದಂದು ಸಲ್ಲಿಸಿದೆ ಎಂದು ಈಗ ನೆನಪಿಲ್ಲ. ಎರಡನೇ ಹಿಂಬರಹ ಯಾವ ದಿನಾಂಕದಂದು ಬಂತು ಎಂದು ಈಗ ನೆನಪಿಲ್ಲ.

9. ಈ ಪ್ರಕರಣದ ದಾಖಲೆಗಳ ಬಗ್ಗೆ ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಯಾವ ದಿನಾಂಕದಂದು ಹಿಂಬರಹ ಬಂತು ಎಂದು ನಾನು ಬರೆಸಿದ ಬಗ್ಗೆ ಈ ನೆನಪಿಲ್ಲ. ಪಿರ್ಯಾದಿಯನ್ನು ನನ್ನ ವಕೀಲರು ತಯಾರು ಮಾಡಿದ್ದಾರೆ ಎಂದರೆ ಸರಿ . ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನಾನು ಭೋಗ್ಯದಾರನಾಗಿ ಆರೋಪಿ ಮನೆಯಲ್ಲಿ ಇದ್ದಾಗ ನಾನು ಸರ್ಕಾರಿ ಕೆಲಸದಲ್ಲಿ ಇರಲಿಲ್ಲ. ಭೋಗ್ಯ ಪತ್ರದಲ್ಲಿ ನಾನು ಮನೆ ಬಿಡಬೇಕಾದರೆ ಮನೆಗೆ ಏನೆ ಹಾನಿ ಆದರೂ ನಾವೇ ಜವಾಬ್ದಾರಿ ಎಂದು ಬರೆಸಿದ್ದೇವೆ ಎಂದರೆ ಸರಿ. ಹಾನಿ ಪಡಿಸಿದ ಬಗ್ಗೆ ನಾನು ಏನು ಹೇಳಿರುವುದಿಲ್ಲ ಎಂದರೆ ನಾನು ಹಾನಿ

ಪಡಿಸಿರುವುದಿಲ್ಲ. ನಾನು ಹಾನಿ ಮಾಡಿದ ಬಗ್ಗೆ ಆರೋಪಿ ನನಗೆ ಹಲವು ಬಾರಿ ಕೇಳಿದ್ದಾರೆ ಎಂದರೆ ಸರಿಯಲ್ಲ. ಭೋಗ್ಯದ ಹಣದಲ್ಲಿ ಹಾನಿ ಬಗ್ಗೆ ಹಣ ಮುರಿದುಕೊಂಡು ಕೊಡಿ ಎಂದು ಕೇಳಿದ್ದೆ ಎಂದರೆ ಸರಿಯಲ್ಲ.

10. ನಾನು ಭೋಗ್ಯದಾರನಾಗಿ ಮನೆಗೆ ಬರುವ ಮೊದಲು ಮನೆಯಲ್ಲಿ ಎಲ್ಲಾ ವಸ್ತುಗಳು ಚೆನ್ನಾಗಿದ್ದವು ಎಂದರೆ ಸರಿ. ಆರೋಪಿ ಮನೆಯ ಟಿ ವಿ ಪೋಕೇಸ್. ಕಂಪ್ಯೂಟರ್ ಟೇಬಲ್, ಕರ್ಟನ್ , ಹೊರಗಡೆ ಎರಡು ಸ್ವಿಚ್ ಮತ್ತು ಒಂದು ವಾಷ್ ಬೇಷನ್ ನ್ನು ಹಾನಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಹಾನಿ ಬಗ್ಗೆ ಎರಡು ಲಕ್ಷ ರೂಪಾಯಿ ಕೊಡಿ ಎಂದು ಆರೋಪಿ ನನಗೆ ಕೇಳಿದ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ನಾನು ಮನೆ ಖಾಲಿ ಮಾಡುವಾಗ ಆರೋಪಿ ಮತ್ತು ಅವನ ಹೆಂಡತಿ ಮನೆಯನ್ನು ನೋಡಿಯೇ ಬೀಗ ತೆಗೆದುಕೊಂಡರು. ನಾನು ಭೋಗ್ಯಕ್ಕೆ ಬಂದಾಗ ಭೋಗ್ಯದ ಹಣ ಕೊಟ್ಟಾಗ ಅದರ ಭದ್ರತೆಗಾಗಿ ನಿಪಿ- 1 ನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡ ಸದರಿ ನಿಪಿ-1 ನ್ನು ಪಡೆದುಕೊಂಡಿದ್ದರು ಅವರು ತೀರಿಕೊಂಡ ನಂತರ ಈ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಸಮಗ್ರವಾಗಿ ಏನು ಗೊತ್ತಿಲ್ಲದಿದ್ದರೂ ಈ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

11. ನನ್ನ ಮತ್ತು ಆರೋಪಿ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಮತ್ತು ಭದ್ರತೆಗೋಸ್ಕರ ಕೊಟ್ಟ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ದೂರು ದಾಖಲಿಸದ್ದೇನೆ ಎಂದರೆ ಸರಿಯಲ್ಲ.

12. ಪಿರ್ಯಾದಿಯಲ್ಲಿ ಸಾಕ್ಷಿದಾರರಾದ ನನ್ನ ಅಣ್ಣ ಮತ್ತು ವಕೀಲರು ಇದ್ದ ಬಗ್ಗೆ ಬರೆಸಿದ ಬಗ್ಗೆ ಈಗ ನೆನಪಿಲ್ಲ. ದೂರಿನಲ್ಲಿ ಸಾಕ್ಷಿ ಗಳ ಪಟ್ಟಿ ಇರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ ಕೊಡುವಾಗ ಆರೋಪಿ ಮತ್ತು ಅವನ ಹೆಂಡತಿ ಇದ್ದರು. ಬಾಡಿಗೆದಾರರು ಬೇರೆ ಯಾರು ಇರಲಿಲ್ಲ. ದಿಃ 02.05.2022 ರಂದು ಆರೋಪಿಯಿಂದ 5 ಲಕ್ಷ ಹಣವನ್ನು ಪಡೆದುಕೊಂಡಿದ್ದೇನೆ. ಚೆಕ್ಕು ಮತ್ತು

ಹಣವನ್ನು ಅದೇ ದಿನ ಕೊಟ್ಟಿದ್ದು , ಆಗ ನನ್ನ ಅಣ್ಣ ಮತ್ತು ಸದರಿ ವಕೀಲರು ಇದ್ದರು. ಆರೋಪಿ ರವರ ಹೆಂಡತಿಯನ್ನು ಸಾಕ್ಷ್ಯ ಮಾಡಿಸಲು ನನಗೆ ಅಭ್ಯಂತರ ಇಲ್ಲ. ಆರೋಪಿಯು ನನಗೆ ದಿಃ 02.05.2022 ರಂದು ಖಾಲಿ ಮಾಡುವಾಗ ಪೂರ್ತಿ ಹಣ ಕೊಡುತ್ತೇನೆ ಎಂದು ಹೇಳಿದ್ದ.

13. ಮನೆ ಕೊಡಿಸುವಾಗ ಮತ್ತು ಮನೆ ಬಿಡುವಾಗ ಹಾಗೂ ಸಣ್ಣ ಪುಟ್ಟ ವಿಚಾರಕ್ಕೆ ವಕೀಲರು ಬರುತ್ತಿದ್ದರಾ ಎಂದರೆ ಮನೆ ಕೊಡಿಸುವಾಗ ಮನೆ ಬಿಡುವಾಗ ಇದ್ದರು ಸಣ್ಣ ಪುಟ್ಟ ವಿಚಾರಕ್ಕೆ ಬರುತ್ತಿರಲಿಲ್ಲ. ನನ್ನ ವಕೀಲರು ಮತ್ತು ನನ್ನ ಅಣ್ಣ ಇದ್ದರು ಹಣ ಪಡೆದುಕೊಂಡೆ ಮನೆ ಖಾಲಿ ಮಾಡುತ್ತೇನೆ ಎಂದು ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ ಕೊಡುವಾಗ ನನ್ನಅಣ್ಣ ಮತ್ತು ಸದರಿ ವಕೀಲರು ಇದ್ದರು ಮತ್ತು ಅವರು ನನಗೆ ಸಾಕ್ಷಿ ಆಗುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಯಾವುದೇ ನೋಟೀಸ್ ಕೊಡದೇ ಇದ್ದರು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿ ವಿಳಾಸ ಗೊತ್ತಿದ್ದರೂ ತಪ್ಪು ವಿಳಾಸಕ್ಕೆ ನೋಟೀಸ್ ಕಳುಹಿಸಿ, ವಕೀಲರ ಜೊತೆ ಶಾಮೀಲಾಗಿ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ವಕೀಲರು ಬೆಂಗಳೂರಿನಲ್ಲಿ ಇದ್ದಾರೆ. ಚೆಕ್ಕನ ದಿನಾಂಕ ಗೊತ್ತಿರುವುದಿಲ್ಲ ಮತ್ತು ಹಿಂಬರಹ ಗೊತ್ತಿರುವುದಿಲ್ಲ ಆದರೂ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

14. ನನ್ನ ಮುಖ್ಯ ವಿಚಾರಣೆಯನ್ನು ನನ್ನ ವಕೀಲರು ಬರೆದರು ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನನ್ನ ಆಂಗ್ಲ ಬಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನನ್ನ ವಕೀಲರು ನನಗೆ ಹೇಳಿದ್ದಾರೆ. ಆ ರೀತಿ ನನಗೆ ಗೊತ್ತಿದ್ದರೆ ಎರಡು ಬಾರಿ ಹಿಂಬರಹ ಬಂದ ಬಗ್ಗೆ ನಾನು ಬರೆಸುತ್ತಿದ್ದೆ ಎಂದರೆ ನಾನು ಬರೆಸಿದ್ದೇನೆ. ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇ ಮತ್ತು ನಾನು ಹೇಳಿದ ರೀತಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

15. ನೋಟೀಸ್ ತಲುಪದೇ ಇರುವ ಬಗ್ಗೆ ನಾನು ಆರೋಪಿ ಗೆ ಕೇಳಿರುವುದಿಲ್ಲ ಎಂದರೆ ಸರಿ. ನಾನು ಹಾನಿ ಮಾಡಿರುವ ವಸ್ತುಗಳಿಗೆ 2 ಲಕ್ಷ ರೂಪಾಯಿ ಹಣ ಕೊಡಬೇಕಾಗುತ್ತದೆ ಎಂದು ಈ ಸುಳ್ಳು ದೂರು ಕೊಟ್ಟು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಬರಬೇಕಾದ ಬಾಕಿ ಹಣ ಯಾವುದು ಇರುವುದಿಲ್ಲ ಭದ್ರತೆಗಾಗಿ ಕೊಟ್ಟ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡೆ ಎಂದರೆ ಸರಿಯಲ್ಲ. ನಾನು ಹಾಕಿರುವ ಸಾಕ್ಷಿದಾರರ ಪಟ್ಟಿಯಲ್ಲಿ ನನ್ನ ವಕೀಲರು ಮತ್ತು ನನ್ನಅಣ್ಣ ಇರುವುದಿಲ್ಲ ಎಂದರೆ ಸರಿ. ಸುಳ್ಳು ಸಾಕ್ಷಿದಾರರನ್ನು ಸೃಷ್ಟಿ ಮಾಡಿಕೊಂಡು ಆರೋಪಿ ಮೇಲೆ ಸುಳ್ಳು ಆರೋಪ ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಇಷ್ಟು ಹೊತುತ ಹೇಳಿರುವ ಸಾಕ್ಷ್ಯವು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**